A6/8
5

doc-115
T-P-2

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 181 | ಶನಿವಾರ 6—4—46 | ಬಿಡಿ ಪ್ರತಿ 3 ಪೈ

ಸಿಕ್ ಸ್ಥಾನಕ್ಕೆ ಜಿನ್ನಾರವರ ಸಲಹೆ

'ಇಂದು ಅಖಿಲ ಭಾರತ ಸಿಕ್ ವಿದ್ಯಾರ್ಥಿ ಫೆಡರೇಷನ್ ಕಾರ್ಯದರ್ಶಿ, ಉದ್ದೇಶಗಳನ್ನು ನಾನು ಕಂಡೆ. ಸಿಕ್ಖರದೊಂದು ಜಾತಿಯೆಂದೂ, ಅವರು ಸ್ವಂತ ರಾಜ್ಯವನ್ನು ಪಡೆಯಲು ಅರ್ಹರೆಂದೂ ಅದುದರಿಂದ ಅಂಥಹದನ್ನು ಎಲ್ಲಿ ನಿರ್ಮಿಸಬಹುದೋ ಸ್ಥಳವನ್ನು ನೋಡಿಸಿದಲ್ಲಿ ಅಂಥಾದಕ್ಕೆ ವಿರೋಧನಾಗುಪುನಿಲ್ಲನೆಂಪೂ ಅವರಿಗೆ ಸ್ಪಷ್ಟಪಡಿಸಿರುತ್ತೇನೆ. ಸಿಕ್ಖರಿಗೂ ಮುಸ್ಲಿಂರಿಗೂ ಸ್ನೇಹವನ್ನುಂಟು ಮಾಡುವುದು ನನಗೆ ಸಮ್ಮತವಾಗಿದೆ ಸರ್ವವಿಧಗಳಲ್ಲಿ ಅದಕ್ಕಾಗಿ ನನ್ನ ಶಕ್ತಿಯನ್ನುಪಯೋಗಿಸಲು ಸಿದ್ಧನಾಗಿದ್ದೇನೆ ಸಿಕ್ಖರು ಸನ್ನನ್ನು ನುಂಬೇಕೆಂದು ತಿಳಿಸುತ್ತಿದ್ದೇನೆ' ಎಂಬ ದಾಗಿ ಜಿನ್ನಾ ಹೇಳಿದ್ದಾರೆ.

ಅಮೇರಿಕೆಯಲ್ಲಿ ಮೆಣಸು ಅಭಾವ

ಪಾಶ್ಚಾತ್ಯರು ಮೆಣಸಿನ ರುಚಿಗೆ ಮೊಹಿತರಾಗಿರುವುದು ಬಹಳ ಕಾಲದಿಂದೆನ್ನಬೇಕು. ಮೆಣಸಿಗೆ ತಾಯ್ನಾಡು ಭಾರತ ದೇಶ ಹಾಗೂ ದೂರಪ್ರಾಚ್ಯ ದೇಶಗಳು ಅಮೆರಿಕಾದವರು ದಾಸ್ತಾನು ಮಾಡಿಟ್ಟಿದ್ದ ಮೆಣಸಿನ ಸ್ಟಾಕು ಕಡಿಮೆಯಾಗಿ ಮೂರು ಸಾವಿರ ಟನ್ನುಗಳಿಗೆ ಇಳಿದಿದೆ. ಭಾರತ ದೇಶದ ಮೆಣಸನ್ನು ಪೌಂಡು ಒಂದಕ್ಕೆ ಇಪ್ಪತ್ತೂರೂವರೆ ಸೆಂಟುಗಳಂತೆಯಾದರೂ ಕೊಟ್ಟು ಕೊಂಡು ಶೇಖರಿಸಲು ಆತುರರಾಗಿದ್ದಾರೆ. ಅಮೆರಿಕೆಗೆ ಒಟ್ಟು ತೊಂಭತ್ತು ಲಕ್ಷ ಟನ್ನು ಮೆಣಸು ಬೇಕಾಗಿದ್ದು, ಭಾರತ ದೇಶವು ಸ್ವತಂತ್ರವಾದಲ್ಲಿ ನಮಗೆ ಅಕ್ಕಿ ಅಭಾವ ವಿರುವಾಗ 'ಅಕ್ಕಿಯನ್ನು ಕೊಟ್ಟು ಮೆಣಸನ್ನು ತೆಗೆದುಕೊಂಡು ಹೋಗಿ' ಎಂದು ಹೇಳಲು ಧೈರ್ಯವಿರುತ್ತಿದೆ. ಮೆಣಸಿಗೆ ಬದಲಾಗಿ ಹಣವನ್ನು ಅಮೆರಿಕದವರಿಂದ ತೆಗೆದುಕೊಳ್ಳದೆ ಅಕ್ಕಿ ಮತ್ತು ಗೋಧಿಗಳನ್ನು ಅವರಿಂದ ಪಡೆಯಲು ಯತ್ನಿಸುವುದೂ ಭಾರತ ದೇಶದ ಇಂದಿನ ಆಹಾರ ವಸ್ತುಗಳ ಅಭಾವವಿರುವ ಸಮಯದಲ್ಲಿ ಉಚಿತವಿರುತ್ತದೆ.

ಇರಾಕಿನಲ್ಲಿ ಎಣ್ಣೆ ತೆಗೆಯುವಿಕೆ

ಇರಾಕಿನಲ್ಲಿ ಸೊಕಾಕಾನಿಮಾ ಕ್ಯೂಂ ಕಾರ್ಪೊರೇಷನ್ನಿನವರಿಗೆ ದಿನ ಹಿಂದಕ್ಕೆ 9000 ಡ್ರಮ್ಮುಗಳ ಎಣ್ಣೆಯು ಸಿಗುತ್ತಿದೆ. 1940 ನೇ ಇಸ್ವಿ ವೇಳೆಗೆ ಇಸ್ಪತ್ತೈದು ಸಾವಿರ ಡ್ರಮ್ಮುಗಳಷ್ಟು ಸಿಗುವಂತೆ ಏರ್ಪಾಡು ನಡೆಯುತ್ತಿದೆ.

ಪಾಕೇಸ್ಥಾನಕ್ಕೆ ದಾರಿ ತಪ್ಪಿತು

ದೆಹಲಿಯಲ್ಲಿ ಸ್ವಾರಸ್ಯ ಪ್ರಸಂಗ

ನವದೆಹಲಿ, ಏ 4 — ಜ || ಜಿನ್ನ ಸಾಹೇಬರು ಮಂತ್ರಿ ನಿಯೋಗದೊಡನೆ ಮೂರು ಘಂಟೆಗಳ ಕಾಲ ಮಾತುಕತೆ ನಡೆಸಿದರು. ಸಂಭಾಷಣೆ ಮುಗಿದು ಅವರು ಹಿಂದಿರುಗಿ ಬಂದಾಗ ಅವರ ಮುಖವು ಕಳಾಹೀನವಾಗಿತ್ತು. ಪತ್ರಿಕಾ ಫೋಟೋಗ್ರಾಫರ್ಸನ್ನು ಕುರಿತು 'ಹೇಳಬೇಕಾದದ್ದೇನೂ ಇಲ್ಲ, ದಯವಿಟ್ಟು ದೂರ ಸರಿಯಿರಿ' ಎಂದು ಘರ್ಜಿಸಿದರು. ಜಿನ್ನಾರವರ ಭೇಟಿಗೆ ಬಂದಾಗ ಅವರ ವಾಹನವು ಬೇರೆ ಸ್ಥಳಕ್ಕೆ ಹೋಗಿ, ಪುನಃ ಗೊತ್ತಾದ ಸ್ಥಳಕ್ಕೆ ಬಂದಿತು. ಹಲವರು 'ಪಾಕೇಸ್ಥಾನಕ್ಕೆ ದಾರಿ ತಪ್ಪಿತು' ಎಂಬುದಾಗಿ ಅಂದರು.

—

ನವದೆಹಲಿಯ ಅಜ್ಮೀರ್ ದ್ವಾರದ ಬಳಿಯಿರುವ ರಾಮಲೀಲಾ ಮೈದಾನದಲ್ಲಿ ಗಾಂಧೀಜೀ ಪ್ರಾರ್ಥನಾ ಸಭೆಗಳನ್ನು ನಡಿಸುವರು. ಅಲ್ಲಿ ಐವತ್ತು ಸಾವಿರ ಮಂದಿ ಸೇರಲು ಸ್ಥಳವಿದೆ.

ಂ

ಸಂಸ್ಥಾನ ಪ್ರಜೆಗಳ ಪ್ರತಿನಿಧಿಯಾಗಿ ಸಂ || ನೆಹರು ನಿಯೋಗ ಭೇಟಿಯನ್ನು ಮಾಡುವರು.

ಂ ಂ

ನವದೆಹಲಿಯ ಕಾಬೂಲ್ ಲೈನ್ಸು ಮುಂತಾದ ರಾಷ್ಟ್ರೀಯ ಸೇನೆಗಳ ತಿಬಿರಕ್ಕೆ ತಾಂಧೀಜಿ ಭೇಟಿಯಿತ್ತು ಒಂಪೂರೆ ಗಂಟೆ ಕಾಲ ವಿಚಾರ ವಿನಿಮಯವನ್ನು ನಾಡಿದರು.

ಲಂಡನ್, ಏ 4 — ಕಾಮನ್ಸ್ ಸಭೆಯಲ್ಲಿ ಪ್ರಧಾನಿ ಕ್ಲೆಮೆಂಟ್ ಅಟ್ಲೀರವರು "ಬ್ರಿಟಿಷ್ ಆಹಾರ ಮಂತ್ರಿಗಳು ಮತ್ತು ಭಾರತ ಆಹಾರ ನಿಯೋಗದ ಶ್ರಮದ ಫಲವಾಗಿ ಭಾರತಕ್ಕೆ ಜನವರಿಯಲ್ಲಿ ಸಿಕ್ಕುರಿಸಲ್ಪಟ್ಟಿದ್ದ ಆಹಾರಕ್ಕಿಂತ 3 ರಷ್ಟು ಹೆಚ್ಚು ಸರಬರಾಗಿದೆ" ಎಂಬುದಾಗಿ ಹೇಳಿದರು ಟರ್ಕಿಯಿಂದ ಜೀವ ಜಂತುಗಳ ರಫ್ತನ್ನು ಹೆಚ್ಚಿಸುವುದಾಗಿಯೂ ಸಹ ತಿಳಿಸಿದರು.

—

ಲಂಡನ್, ಏ 4 — ಬ್ರಿಟಿಷ್ ಸೈನ್ಯವು 1944 ರಲ್ಲಿ ಕಳುವು ಮೋಸ ತಿಳಿಗೇಡಿತನ ಮುಂತಾದುವುಗಳಿಂದ 1860479 ಪೌಂಡುಗಳನ್ನು ಕಳೆದುಕೊಂಡಿದೆ.

ಲಂಡನ್, ಏ 3 — ರೋನ್-ಸ್ನರಾದ ಕಟ್ಟಲ್ಪಟ್ಟಿದ್ದ ಪಟ್ಟಣವು ಸುಮಾರು 2 ನೇ ಶತಮಾನದ್ದು — ಲ್ಯಾಡನ್ನಸ ವಿಮಾನ ಧಾಳಿಗೆ ಸಿಕ್ಕಿಬಿದ್ದಿದ್ದ ಸ್ಥಳದಲ್ಲಿ ಐದು ಅಡಿ ಆಳ ತೋಡಲು ಸಿಕ್ಕಿರುವುದು. ಇನ್ನೂ ಹೆಚ್ಚು ಶೋಧನೆ ಕೆಲಸ ನಡೆದರೆ ಸುತರ ವಿಷಯವು ಸ್ಪಷ್ಟವಾಗುವುದೆಂದು ಹೇಳಲಾಗಿದೆ.

ಪೇರಿಸ್ ಏ 4 — ನೇ 1 ರಿಂದ ನಡೆಯುವ ಶಾಂತಿ ಸಮ್ಮೇಳನವನ್ನು ಮುಂದುವರಿಸಬೇಕೆಂದು ರಷ್ಯಾ ಕೇಳಿಪಿಟ್ಟಿರ್, ಅಮೆರಿಕಾ ನಡೆಸುಬೇಕೆಂದು ತಿಳಿಸಿದೆ.

ಬೊಂಬಾಯಿ ಕಾಂಗ್ರೆಸ ಸರ್ಕಾರವು ಪ್ರಥಮ ಕಾಯ್ದೆಗಳ ಬಿಡುಗಡೆ ವಾರಂಟುಗಳ ರದ್ದು ಎಂದು ತಿಳಿದುಬಂದಿದೆ.

ಲಾಹೋರ್, ಏ 4 — ಪಾಟಿಯಾಲಾದಲ್ಲಿ ಸೇರಿದ್ದ ಭಾರಿ ಸಭೆಯಲ್ಲಿ ದಾಖಲೆ ಮೂಲಕ ಶ್ರೀ ಸಂಭಾಷರು ಬದುಕಿರುವುದಾಗಿ ವ್ಯಕ್ತಪಟ್ಟಿದೆ

ಇಟಲಿಗೆ ಹೆಚ್ಚು ಹತ್ತಿ ಬೇಲುಗಳು

ವಾಷಿಂಗ್ಟನ್, ಏ 1 — ಅಮದು ರಫ್ತು ಬ್ಯಾಂಕಿಗೆ ಇಟಲಿ ಸರ್ಕಾರ ಮತ್ತು ಬ್ಯಾಂಕುಗಳು 25 ಮಿಲಿಯ ಡಾಲರ್ ಸಾಲಕ್ಕೆ ರುಜು ಹಾಕಲು ಒಪ್ಪಿರುವುದಾಗಿಯೂ, ಈ ಹಣ ಪೂರ್ತಿ ಉಪಯೋಗಿಸಿದರೆ ಇಟಲಿಗೆ ಎರಡು ಲಕ್ಷ ಅಮೆರಿಕಾ ಹತ್ತಿ ಬೇಲುಗಳು ದೊರೆಯುವುದೆಂದು ಪ್ರಕಟವಾಗಿದೆ.

ಅಭಿನವ ಸುಂದೋಪಸುಂದರು

ಸುಂದೋಪಸುಂದರು ಇಬ್ಬರೇ ಅಣ್ಣ ತಮ್ಮಂದಿರು. ಅತಿ ಭಯಂಕರರು. ಲೋಕ ಕಂಟಕರು. ಒಬ್ಬ ಸ್ತ್ರೀಗಾಗಿ ಹೋರಾಡಿ ಸತ್ತರು. ಹಾಗೆಯೇ ಈ ಚಿಗೆ ಕಂಚಾಚಿ ಸಮೀಪದ ಹಳ್ಳಿಯೊಂದರಲ್ಲಿ ಒಬ್ಬ ಸ್ತ್ರೀಗಾಗಿ ಹಲವರು ಹೋರಾಡಿ ತಪಾಕಿಗಳನ್ನು ಕೂಡಾ ಉಪಯೋಗಿಸಿ ಹನ್ನೆರಡು ಮಂದಿ ಸತ್ತರು.

ರಷ್ಯಾದಿಂದ ಹಣ ಸಂದಿತು

ನ್ಯೂಯಾರ್ಕ್, ಏ 1 — ಯು. ಎನ್. ಓ. ಕಾರ್ಯಾಚರಣ ಬಂಡವಾಳಕ್ಕೆ ರಷ್ಯಾವು ತನ್ನ ಭಾಗದ 1723000 ಡಾಲರ್‌ಗಳ ಬಿಲ್ಲನ್ನು ಫೆಬ್ರವರಿ 30 ರಲ್ಲಿ ಕೇಬಲ್ ಆರ್ಡರ್ ಮೂಲಕ ಪಾವತಿ ಮಾಡಿರುವುದೆಂದು ಸೆಕ್ರಟರಿ ಜನರಲ್ಲರು ಹೇಳಿದ್ದಾರೆ.

ಅಣು ಬಾಂಬಿಗೆ ಭಾರಿ ಖರ್ಚು

ಲಂಡನ್, ಏ 3 — ಬ್ರಿಟನ್ನಿಗೆ ಅಣುಬಾಂಬು ತಯಾರಿಕೆಗೆ ಐನೂರು ಕೋಟಿ ಪೌಂಡು ವ್ಯಯವಾಗಿರುವುದೆಂದೂ, ರೇಡಾರ್ ಸಂಬಂಧ ಶೋಧನೆಗೆ ಇದಕ್ಕೂ ಹೆಚ್ಚು ಖರ್ಚಾಗಿದೆಯೆಂದೂ ಹೇಳಲಾಗಿದೆ.

ಸೈಕಲ್ ಜಟಕಾ ಡಿಕ್ಕಿ

ಮೈಸೂರು, ಏ 6 — ನಿನ್ನೆಯ ದಿನ ಸಂಜೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಎದುರಿನಲ್ಲಿ ಸೈಕಲ್ ಟಾಂಗಾ ಗಾಡಿ ಡಿಕ್ಕಿ ಬಡೆಯಿತು. ಸೈಕಲ್‌ಗೆ ಬಿದ್ದಿರುವ ಏಟಿನ ಹೊರತು ಮತ್ತಾವ ಅಪಾಯ ನಷ್ಟಗಳು ಸಂಭವಿಸಿಲ್ಲ.

ಮನೆ ಸೌಲಭ್ಯ

ಭದ್ರಾವತಿ ಕಾರ್ಖಾನೆಯ ಕಾರ್ಮಿಕರುಗಳಿಗಲ್ಲ ಮನೆಯ ಸೌಕರ್ಯಗಳನ್ನೊದಗಿಸುವ ಸಲುವಾಗಿ 15 ವರ್ಷದ ಯೋಜನೆಯನ್ನು ಮಾಡಲಾಗಿದೆ.



ಸಾಮಾಜಿಕ

ಅದ್ಭುತ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಪುಸ್ತಕ ಕೆಳಗಿಡಲು ಮನ ಸ್ಸಾಗುವುದಿಲ್ಲ ಬೆಲೆ ಗಿ ಣಿ ಪೋಸ್ಟೇ ಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 66-12-0
ಚಿಕ್ಕ ತೊಲ 1 ಕ್ಕೆ	59-0-0
ಬೆಳ್ಳಿ	1-10-3

For Good Printing

L. N. Press

Sriramp et MYSORE

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಂಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಪ್ರಕಾರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧವಾಗಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಫಲೆಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಂಟಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ಏಜಂಗಳಿಗೆ ಮತ್ತು ಸ್ಟಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

At Ranjit ❁ From 31-3-46

RAJPUTANI

Ranjit's 101 st Picture

ಜಯರಾಜ್ — ವೀಣಾ — ಬಿಪಿನ್‌ಗುಪ್ತ — ಗುಲಾಂಮಹಮದ್

— ಪಾತ್ರವಹಿಸಿರುವ —

ರಾಜಪುತಾನಿ

At Opera

5 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

ಮುಂದಿನ ವಿನೋದ—

ಹೊನ್ನಪ್ಪ ಭಾಗವತರ್ ಟಿ ಆರ್. ರಾಜಕುಮಾರಿ ವಸಂತ ಕೋಕಿಲಂ

ಬಾಲಯ್ಯ ಕಾಳಿ ಎಣ್ ರತ್ನಂ

ಪಾತ್ರ ವಹಿಸಿರುವ

— ವಾಲ್ಮೀಕಿ —

(ತಮಿಳು)

Get Medical Diplomas

At home : — Ayurvedic Homeopathic, Unani, etc., Prospectus Free.

Old Indian Medical College Kotgarh, Simla

ಹಸಿ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

ಅಬ್ಬ ವ್ಯೆ.ಜಿ ಕಾಯಕಲ್ಪ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನಿ

ಶಕ್ತಿಸುಧಾ

ಬೆಲ್ಲದಬ್ಬಿ ೧ ಕ್ಕೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao at the Satvavadi Press, Chamaraja Agrahar, Mysore